ಭಯದಿಂದ ಒಂದೇ ಸಮನೆ ಓಡಿ ಸರೋಜಳ ಮನೆ ತಲುಪಿದ್ದಳು ಕಮಲ.

ನೀರು ನುಗ್ಗುತ್ತಲೇ ಇದೆ. ಮನೆಯೊಳಗೆ ತೇಲುವ ಪಾತ್ರೆ ಪಗಡೆಗಳನ್ನೆಲ್ಲಾ ಎಳೆದೆಳೆದು ಒಂದೇ ಭರ ಮೇಲೆ ಅಟ್ಟಕ್ಕೆ ಎಸೆಯುತ್ತಿದ್ದಾಳೆ ಸರೋಜ. ಕಮಲ ಮನೆಗೆ ನುಗ್ಗಿದವಳೇ, ಸರೋಜಳ ಕೈ ಹಿಡಿದೆಳೆದು, ತಾನೇ ಮನೆಗೆ ಬೀಗ ಹಾಕಿ, 'ಬದುಕಿದರೆ ಎಲ್ಲ ಮತ್ತೊಮ್ಮೆ ಜೋಡಿಸಬಹುದು' ಅಂತ ದರದರನೇ ಹಿಡಿದೆಳೆಯುತ್ತಾ ಸೇತುವೆ ದಾಟ ಮನೆ ತಲಪುವಷ್ಟರಲ್ಲಿ ಸೇತುವೆಯೇ ಮುಳುಗಿ ನದಿಯಾಗಿತ್ತು.

ಆ ಮನೆಗೆ ಸರೋಜ ಕಾಲಿಡದೇ ವರ್ಷಗಳೇ ಸಂದಿದ್ದವು. ಮಗನನ್ನು ಪುತ್ತೂರಿನ ಕಾಲೇಜಿಗೆ ಸೇರಿಸಿ ಅಲ್ಲೇ ಹಾಸ್ಟೆಲ್‌ನಲ್ಲಿರಿಸಿದ ಮೇಲಂತೂ ಈ ಮನೆ ಕಡೆ ದೀಪಾವಳಿಗೆ ಕೊಲೆಗೆ ಇಡುವ ಕಾರ್ಯಕ್ರಮಕ್ಕೂ ಬಂದಿರಲಿಲ್ಲ. ಕಮಲಳ ದೊಡ್ಡಕ್ಕನಿಗೆ ಮಕ್ಕಳಿರಲಿಲ್ಲ. ಭಾವ ಮಿಲಿಟ್ರಿಲಿ ಇರುವ ಕಾರಣ ಅಕ್ಕನ ಒತ್ತಾಯಕ್ಕೆ ಹಿರಿಮಗಳು ಸಿಂಚುವನ್ನು ಅಲ್ಲಿ ಬಿಟ್ಟಿದ್ದಳು. ಎರಡನೇ ಮಗಳು ಪಮ್ಮಿಗೆ ಅಕ್ಕನಿಲ್ಲದೆ ಬೇಜಾರು ಬಂದು ಅವಳೂ ಅಲ್ಲೇ ಹೋಗಿದ್ದಳು. ಸಿಂಚು ಪಮ್ಮಿ ಇರುವಾಗ ಸರೋಜಳ ಮಗ ಅನ್ವಿತ್ ಆಗಾಗ್ಗೆ ಬರುವುದಿತ್ತು. ನೇಮ, ಜಾತ್ರೆ, ಹಬ್ಬ ಹರಿದಿನ ಅಂತ ಒಟ್ಟು ಸೇರುವುದಿತ್ತು. ಈಗ ಮಕ್ಕಳು ಯಾರೂ ಮನೆಯಲ್ಲಿ ಇಲ್ಲದೆ ಹತ್ತಿರದ ಸಂಬಂಧವೂ ದೂರವಾಗತೊಡಗಿತು. ವಿನಾಕಾರಣ ಅಂತಹ ವೈರತ್ವ, ಮುನಿಸು ಯಾಕೆ ಅವಳು ಕಟ್ಟಿಕೊಂಡಳೋ ?! ಅವಳಿಗೇ ಗೊತ್ತು.

'ಹೋಗಿ ಸ್ನಾನ ಮಾಡಿ ಬಾ...' ಅವಳ ಕೈಗೆ ಟವೆಲು ಮತ್ತು ನೈಟಿ ಇಡುತ್ತಾ ಕಮಲ ಅಡುಗೆ ಮನೆಗೆ ಕಾಫಿ ಮಾಡಲು ಹೋದಳು.

ಸರೋಜ ಸ್ನಾನ ಮಾಡಿ ಬಂದಾಗ ಅವಳಿಗೂ ಒಂದು ಲೋಟ ಕಾಪಿ ಕೊಟ್ಟು, ತಾನೂ ಹೀರುತ್ತಾ ಮಳೆ ನೋಡತೊಡಗಿದಳು. ಅವರೊಳಗೆ ಆಡಲು ಮಾತುಗಳೇ ಇರಲಿಲ್ಲ. ಕೆಲವೊಂದು ದೀರ್ಘ ಮೌನ ಬಾಯಿ ಕಟ್ಟಿಸಿ ಬಿಡುತ್ತದೆ ಅನ್ನುವುದು ಇದಕ್ಕೇ ಇರಬೇಕು. ಹೋಗಲಿ, ತನ್ನ ಮನೆಗೆ ಬಂದಿದ್ದಾಳೆ ಅಂತ ಕಮಲಳೇ ಮಾತು ಶುರು ಮಾಡಿದ್ದಳು.

'ಮಳೆ ಕಡಿಮೆ ಆಗುವವರೆಗೆ ಇನ್ನು ಇಲ್ಲಿಯೇ ಇರಿ. ಅಲ್ಲಿ ಎಷ್ಟಾದರೂ ಅಪಾಯವೇ. ಸೀನ ಭಾವ ಎಲ್ಲಿ ಹೋಗಿದ್ದಾರೆಯೋ ಏನೋ. ಫೋನಿಗೂ ಸಿಗುತ್ತಿಲ್ಲ. ಅವರೂ ಇಲ್ಲಿಗೆ ಬರಲಿ. ಬೆಳಗ್ಗೆ ಇಲ್ಲಿಂದಲೇ ಹೋಗಿ ನಾಯಿಗೆ ಕೋಳಿಗೆ, ದನಕ್ಕೆ ಹಾಕಿ ಬಂದರಾಯಿತು. ಸೀನ ಭಾವ ಬೆಳಗ್ಗೆ ಹೋದರೆ ರಾತ್ರೆಯೇ ಬರುವುದು. ನೀನೊಬ್ಬಳೇ ಇದ್ದು, ಏನಾರು ಹೆಚ್ಚು ಕಮ್ಮಿ ಆಗುವುದು ಬೇಡ. ಹೀಗೆ ಮಳೆ ಹೊಯ್ದರೆ ಇನ್ನೆಂತದೋ? ಅಡಿಕೆ ಮರದಲ್ಲಿ ಒಂದು ಅಡಿಕೆಯೂ ಉಳಿಯಲಾರದು. ಇನ್ನು ಬದುಕುವುದೆಂತೋ...?'

ಸರೋಜಳೊಂದಿಗೆ ಮಾತಾಡುವುದಾ? ಸ್ವಗತಕ್ಕೆಂಬಂತೆ ಹೇಳುತ್ತಿದ್ದಾಳೋ?

ಆದರೆ, ಅವರಿಬ್ಬರ ನಡುವಿನ ಮೌನವನ್ನು ಭೇದಿಸಲು ಸುಮ್ಮಗೆ ಮಳೆಯೊಂದಿಗಿನ ಮಾತು ಸೇತುವೆಯಾಗಿತ್ತು. ಸೂರಿನಡಿಯಲ್ಲಿ ಬೀಳುವ ಮಳೆಯ ನೋಡುತ್ತಾ ಸರೋಜ ಗತಕ್ಕೆ ಜಾರಿಕೊಳ್ಳುತ್ತಿದ್ದಳು.

ತಾನು ಪಾಲಾಗಿ ಬೇರೆ ಹೋದಾಗ ಸರೋಜ ಸುಮ್ಮಗೆ ಹೋಗಿರಲಿಲ್ಲ. ಯಾವುದೆಲ್ಲ ಪಾಲಿಗೆ ಬರಬೇಕೋ ಅವನ್ನೆಲ್ಲ ಕೇಳಿ ಕೇಳಿ ಒಯ್ದಿದ್ದಳು. ಬೇಕಿರಲಿ ಬೇಡದಿರಲಿ ಎಲ್ಲವನ್ನೂ ಹುಡುಕಿ ಹುಡುಕಿ ಎತ್ತಿ ಸಾಗಿಸಿದ್ದಳು. ಕೊನೆಗೆ ಅತ್ತೆಯ ಬಂಗಾರು ಪಾಲು ಮಾಡುವಾಗ ಕಮಲಳಿಗೆ ಎರಡು ಹೆಣ್ಣುಕ್ಕಳು ಇವೆಯಲ್ಲ ಅಂತ ಒಂದೆರಡು ಸರ ಈಚೆ ಇಟ್ಟಿದ್ದನ್ನೂ ಸುಮ್ಮಗೆ ಬಿಡಲಿಲ್ಲ. 'ಪಾಲು ಅಂದರೆ ಪಾಲೇ, ಅದರ ಮುಂದೆ ಸುಖ ದುಃಖ ಇಲ್ಲ' ಅಂತ ಖಡಾಖಂಡಿತವಾಗಿ ಹೇಳಿದ ಮೇಲೆ ಕಮಲಳೂ ವಾದಿಸಲು ಹೋಗಲಿಲ್ಲ. 'ಏನೋ ಅತ್ತೆದು ಚಿನ್ನ ಇದ್ದ ಕಾರಣ ತಾನೇ ಇಷ್ಟೆಲ್ಲ ರಗಳೆ, ಇಲ್ಲದಿದ್ದರೆ ನಾವೆಲ್ಲ ನಮ್ಮ ಅಗತ್ಯದ್ದನ್ನು ಮಾಡಿಸಿ ಕೊಳ್ಳುತ್ತಿರಲಿಲ್ಲವಾ' ಅಂತ ಕಮಲಳೇ ಹೇಳಿದ ಮೇಲೆ ಎಲ್ಲ ಸಮಾಪಾಲು ಆಗಿತ್ತು. ಜೊತೆಗೆ ಕಾರಣವಿಲ್ಲದೆ ಕಾಲು ಕೆರೆದು ಜಗಳ ಮಾಡಿ ಅಕ್ಕನಿಗೆ ಬೇಕಾದ್ದು ಬೇಡದ್ದು ಎಲ್ಲ ಹೇಳಿಯೇ ಹೋದದ್ದು ನೆನಪಾಗಿ ಮನಬಿಚ್ಚಲು ಆಕೆಗೆ ಹಳತ್ತೆಲ್ಲ ತಡೆಯಾಗುತ್ತಿತ್ತು. ಮಳೆ ಮಾತ್ರ ಎಲ್ಲ ಗೋಡೆಗಳನ್ನ ಕೆಡವಿದಂತೆ ಸುರಿಯುತ್ತಿತ್ತು.

